

# ಡಾ. ಎಂ. ಎಸ್. ಮೂರ್ತಿ

ಸಂವೇದನಾಶೀಲ ಕಲಾವಿದರೆಂದೇ ಗುರುತಿಸಲ್ಪಡುವ ಡಾ.ಎಂ.ಎಸ್.ಮೂರ್ತಿ ಅವರು ಬೆಂಗಳೂರಿನಂತಹ ಮಹಾನಗರದಲ್ಲಿ 1960ರಲ್ಲಿ ಹುಟ್ಟಿ ಬೆಳದವರಾದರೂ, ಅವರ ತುಡಿತ, ನಂಬಿಕೆ, ಪ್ರೀತಿಗಳು ಗ್ರಾಮೀಣ ನೆಲೆ, ದೇಸಿ ಚಿಂತನೆಗಳಿಗೆ ಒತ್ತು ಕೊಡುತ್ತವೆ. ಕಲಾವಿದರಾಗಿ ಸುಮಾರು ನಾಲ್ಕು ದಶಕಗಳ ಅವರ ಅನುಭವ ಕೇವಲ 'ಕಲಾಕೃತಿ' ಗಳನ್ನು ಸೃಷ್ಟಿಸಿ ಹೆಮ್ಮೆ ಪಡುವುದಲ್ಲದೆ, ಕಲೆಯ ನೋಟದ, ಸಂವೇದನೆಯ ಮೂಲಕ ಬದುಕನ್ನು ಸರಳವಾಗಿ ಮತ್ತು ಸ್ಪಷ್ಟವಾಗಿ ಕಾಣುವ ಜೀವನ ಪ್ರೀತಿ ಅವರದು.

ಸೌಜನ್ಯ, ಸಜ್ಜನಿಕೆ, ಸಂಯಮ ಮತ್ತು ಪ್ರೀತಿ ಅವರ ಯಶಸ್ಸಿನ ದೊಡ್ಡ ಶಕ್ತಿ. ಇಂತಹ ಚೈತನ್ಯವನ್ನು ಬಳಸಿಕೊಂಡು 'ನಿಶ್ಯಬ್ಧ' ವಾಗಿ 'ಬುದ್ಧನ ಬೆಳಕಿ' ನಲ್ಲಿ ಅವರ 'ಭಿಕ್ಷಾ ಪಾತ್ರೆ'ಯನ್ನು ಹುಡುಕುವ ಪ್ರಯತ್ನದಲ್ಲಿ ಮೂರ್ತಿಯವರು ತಮ್ಮ ಕಲಾರಚನೆಯ ಪ್ರಯೋಗಗಳಿಗಾಗಿ ಬಹಳ ಸಮಯ ಕಳೆದಿದ್ದಾರೆ. 'ಮಕ್ಕಳ ಮನಸ್ಸಿನ ಚಿತ್ರಗಳು' ಎಂಬ ಅವರ ಮಹಾಪ್ರಬಂಧ ಮಕ್ಕಳ ಚಿತ್ರಕಲೆಯನ್ನು ಕುರಿತ ಮೊದಲ ಅಧಿಕೃತ ಸಂಶೋಧನೆ. ಎರಡು ದಶಕಗಳ ಈ ಸಂವೇದನೆಗೆ ಹಂಪಿ ವಿಶ್ವವಿದ್ಯಾಲಯ ಡಾಕ್ಟರೇಟ್ ನೀಡಿ ಗೌರವಿಸಿದೆ. ಪ್ರಶಸ್ತಿ, ಪುರಸ್ಕಾರಗಳಿಂದ ಬಹು ದೂರವಿರುವ ಮೂರ್ತಿ ಅವರು 'ಬುದ್ಧನೆಂಬ ಬೆಳಕು' ಕೃತಿಗೆ ಇರಾನ್ ದೇಶದ ಅಕಾಡೆಮಿ ಆಫ್ ಆರ್ಟ್‌ನ 'ಅಂತರಾಷ್ಟ್ರೀಯ ಬೈನಾಲೆ ಪ್ರಶಸ್ತಿ'ಯ ಗೌರವ ಸಂದಿದೆ. ಅವರ ಸಾಹಿತ್ಯ ಗ್ರಂಥ 'ದೇಸಿ ನಗು' ಪ್ರಬಂಧ ಸಂಕಲನಕ್ಕೆ 2006ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. 'ಯಶೋಧರೆ ಮಲಗಿರಲಿಲ್ಲ' ಎಂಬ ನಾಟಕಕ್ಕೆ ಆಕಾಶವಾಣಿ ರಾಷ್ಟ್ರೀಯ ಉತ್ಸವ ನಾಟಕ ಪ್ರಶಸ್ತಿ ಜೊತೆಗೆ ನಾಟಕವು ಮರಾಠಿ, ಇಂಗ್ಲೀಷ್ ಭಾಷೆಗೆ ಭಾಷಾಂತರಗೊಂಡಿದೆ. ಮೂರ್ತಿಯವರ 'ದೃಶ್ಯ' ಕಾದಂಬರಿ 'ದೃಶ್ಯ' ಕಲಾಲೋಕದ ಮೊದಲ ಕಾದಂಬರಿಯಾಗಿ ಪುಸ್ತಕ ಪ್ರಾಧಿಕಾರದ ಪ್ರಶಸ್ತಿಯ ಗೌರವ ಪಡೆದಿದೆ.

ಮೂರ್ತಿಯವರು ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಸಾಪ್ತಾಹಿಕ ಸೌರಭ ಪುರವಣಿಯ 'ಸಂವೇದನೆ' ಅಂಕಣಕಾರರಾಗಿ ಜನಪ್ರಿಯರಾಗಿದ್ದಾರೆ. 'ನಿಜದ ನೆರಳು' ಆಯ್ದ ಅಂಕಣ ಬರಹಗಳ ಸಂಗ್ರಹ ಇವರ ನಾಲ್ಕನೇ ಪುಸ್ತಕ. ಇವರ ಕಲಾಕೃತಿ ದೆಹಲಿಯ ಆಧುನಿಕ ಕಲಾಗ್ಯಾಲರಿಯ ಶಾಶ್ವತ ಸಂಗ್ರಹ ಸೇರಿದೆ. ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಪ್ರದರ್ಶನಗಳಲ್ಲಿ ಭಾಗವಹಿಸಿದ ಮೂರ್ತಿಯವರು ಪ್ರಸ್ತುತ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಅಕಾಡೆಮಿಯ ಸುವರ್ಣ ಸಂಭ್ರಮದ ಸಂದರ್ಭವನ್ನು, ಅದರ ಘನತೆ, ಗೌರವಗಳನ್ನು ಹೆಚ್ಚಿಸುತ್ತಾ ಅರ್ಥಪೂರ್ಣ ಕೆಲಸವನ್ನು ರಾಜ್ಯಾದ್ಯಾಂತ ಯಶಸ್ವಿಯಾಗಿ ಮಾಡುತ್ತಿದ್ದಾರೆ. ಜೊತೆಗೆ ತಮ್ಮ ಸ್ಟುಡಿಯೋ 'ಭೂಮಿ'ಯಲ್ಲಿ ಅನೇಕ ಕಲಾಶಿಬಿರ, ವಿಚಾರಸಂಕಿರಣಗಳೊಂದಿಗೆ ಸಕ್ರಿಯವಾಗಿ ತೊಡಗಿ ತಮ್ಮ ಕಲಾರಚನೆಯನ್ನು ಮುಂದುವರೆಸಿದ್ದಾರೆ.